782 ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆ ಬಸವನಬಾಗೇವಾಡಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಚಿಮ್ಮಲಗಿ ಭಾಗ–2 ಹಾಗೂ ಹುಣಶ್ಯಾಳ ಮಧ್ಯದಲ್ಲಿ ಚಕ್ಕಡಿಗಳ ಸಂಚಾರಕ್ಕೆ ರೈಲ್ವೆ ಹಳಿಯ ಮೇಲೆ ರಸ್ತೆ ಕಲ್ಪಿಸಿಕೊಡಲು ರೈಲ್ವೆ ಇಲಾಖೆಯಿಂದ ಅನುಮತಿ ನೀಡುವ ಹಾಗೂ ಈ ರಸ್ತೆಯನ್ನು ರಾಜ್ಯ ಸರ್ಕಾರದಿಂದ ಅಭಿವೃದ್ಧಿಪಡಿಸುವ ವಿಷಯವು ಸರ್ಕಾರದ ಗಮನಕ್ಕೆ ಬಂದಿಡೆಯೇ;

ಆ) ಈ ಕಾಮಗಾರಿಯ ವಿಷಯವು ಪುನರ್ ವಸತಿ ಕೇಂದ್ರಗಳ ಬೇಡಿಕೆಯಾಗಿರುವುದು ನಿಜವಲ್ಲವೇ;

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಳ್ಳಲಿರುವ ಕ್ರಮವೇನು?

ಶ್ರೀ. ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಬಂದಿದೆ.

ಆ) ನಿಜ.

ಇ) ರೇಲ್ವೆ ಮಂಡಳಿಯ ಮಾರ್ಗಸೂಚಿಯ ಪ್ರಕಾರ ಈಗಾಗಲೇ ಕಮೀಷನ್ ಆಗಿರುವ ರೇಲ್ವೆ ಹಳಿಗಳ ಮೇಲೆ ಹೊಸ ಮಾನವ ರಹಿತ ರೇಲ್ವೆ ಲೆವಲ್ ಕ್ರಾಸಿಂಗ್‌ಗಳನ್ನು ಸುರಕ್ಷತಾ ಅಪಾಯದ ಕಾರಣದಿಂದ ನಿರ್ಮಿಸುವಂತಿಲ್ಲ.

761 ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಿರ್ಮಿಸುತ್ತಿರುವ ಹೊಸ ರಸ್ತೆಗಳು ಯಾವವು(ವಿವರ ನೀಡುವುದು);

ಆ) ರಾಜ್ಯದಲ್ಲಿ ಅಭಿವೃದ್ಧಿಗೊಳಿಸುತ್ತಿರುವ ರಸ್ತೆಗಳು ಯಾವುವು;

ಇ) ಬಿ.ಓ.ಟಿ ಆಧಾರದ ಮೇಲೆ ಅಭಿವೃದ್ಧಿಗೊಳಿಸುತ್ತಿರುವ ರಸ್ತೆಗಳೆಷ್ಟು ಅವುಗಳು ಯಾವುವು (ವಿವರ ನೀಡುವುದು);

ಈ) ಇವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಪ್ರಸಕ್ತ ಸಾಲಿನಲ್ಲಿ ಲೊಕೋಪಯೋಗಿ ಇಲಾಖೆ ವತಿಯಿಂದ ಭೂಸ್ವಾಧೀನ ಮಾಡಿಕೊಂಡು ಯಾವುದೇ ಹೊಸ ರಸ್ತೆಗಳನ್ನು

ನಿರ್ಮಿಸಲಾಗುತ್ತಿಲ್ಲ. ವಿವಿಧ ಯೋಜನೆಗಳಡಿಯಲ್ಲಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಿ ರಸ್ತೆಗನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ:-

ಕ್ರ ಸಂ	ಯೋಜನೆ	ಅನುದಾನ ರೂ.ಕೋಟಿಗಳಲ್ಲಿ
1	ಸಿಆರ್ಎಫ್	353.00
2	ನಬಾರ್ಡ್	279.00
3	ಡಾ॥ ನಂಜುಂಡಪ್ಪ ವರದಿ	230.00
4	ಸುವರ್ಣ ರಸ್ತೆ	200.00
5	ಎಸ್ಸಿಪಿ/ಟಿಎಸ್ಪಿ	128.00

ಆ) 2009-10ನೇ ಸಾಲಿನ ಲೆಕ್ಕಶೀರ್ಷಿಕೆ 5054ರಡಿಯಲ್ಲಿನ ಅಪೆಂಡಿಕ್ಸ್-ಇ ಹೊರತುಪಡಿಸಿ ಡಾ॥ನಂಜುಂಡಪ್ಪ ವರದಿ, ಎಸ್ಸಿಪಿ ಅಂಡ್ ಟಿಎಸ್ಪಿ ಕ್ರಿಯಾ ಯೋಜನೆ ಹಾಗೂ ಸುವರ್ಣ ರಸ್ತೆ ಕ್ರಿಯಾ ಯೋಜನೆಗಳಿಗೆ ಒದಗಿಸಲಾಗಿರುವ ಅನುದಾನಕ್ಕೆ ಅನುಗುಣವಾಗಿ ಅನುಮೋದನೆ ನೀಡಲಾಗಿದ್ದು, ಅದರಂತೆ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಇ) ರಾಜ್ಯದಲ್ಲಿನ 8,597 ಕಿ.ಮೀ ಉದ್ದದ ರಾಜ್ಯ ಹೆದ್ದಾರಿಗಳು, 1,176 ಕಿ.ಮೀ ಜಿಲ್ಲಾ ಮುಖ್ಯ ರಸ್ತೆಗಳು ಮತ್ತು 2,866 ಕಿ.ಮೀ ಉದ್ದದ ಗ್ರಾಮೀಣ ರಸ್ತೆಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಯೋಜನೆಯಡಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಈ) ಈ ಯೋಜನೆಯ ಮೊದಲನೇ ಹಂತದ ರಸ್ತೆಗಳಿಗೆ ಕಾರ್ಯಸಾಧ್ಯತಾ ವರದಿ ಮತ್ತು ವಿವರವಾದ ಯೋಜನಾ ವರದಿಗಳನ್ನು ತಯಾರಿಸಲು ಸಮಾಲೋಚಕರನ್ನು ನೇಮಿಸಲಾಗಿದ್ದು, ಯೋಜನಾ ವಿವರಗಳು ತಯಾರಿಕೆಯ ಹಂತದಲ್ಲಿರುತ್ತದೆ. ಹಾಗೂ ಈ ರಸ್ತೆಗಳನ್ನು 2009-10ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

761 Sri Dinesh Gundurao : Hon'ble Minister for Public Works kindly answer to the below question?

a) Which are the new roads being constructed in the State (furnish details);

b) Which are the roads being development in the State;

c) What is the number of roads being developed on BOT basis; which are those; (furnish details);

d) When these roads will be commenced?

Sri C.M.UDASI (Minister for Public Works) :

a) No new roads are being constructed by acquiring land in PW Department during this year. Roads are being developed by releasing grants under various schemes as follows:-

Sl. No.	Schemes	Grants Rs. In Crores
1	CRF	353.00
2	NABARD	279.00
3	Dr. Nanjundappa Report	230.00
4	Suvarna Rasthe	200.00
5	SCP/TSP	128.00

b) Excepting Appendix-E under the Head of Account 5054 approval has already been given for action plans under Dr.Nanjundappa Report, SCP/TSP and Suvarna Rasthe Schemes based on funds allocated during the year 2009-10 and development of roads will be undertaken accordingly.

c) It is proposed to take up 8597 km long State Highways, 1176 kms long district main roads and 2866 kms long rural roads in the State under Public Private Partnership (PPP) Scheme.

d) Consultants have been appointed for preparation of Feasibility Report and Detailed Project Reports for the first phase of road under this scheme, plan details are in the stage of preparation. And these roads are being implemented during 2009-10.

457 ಶ್ರೀ ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಪೌರಾಡಳಿತ ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಡಂ ಪಟ್ಟಣದ ಅಭಿವೃದ್ಧಿಗಾಗಿ 2006–07, 2007–08 ಮತ್ತು 2008–09ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು;

ಆ) ಬಿಡುಗಡೆಯಾಗಿರುವ ಹಣದಲ್ಲಿ ಖರ್ಚಾಗದೆ ಉಳಿದಿರುವ ಹಣವೆಷ್ಟು (ವಿವರ ಒದಗಿಸುವುದು);